(ಇಂದು ದಿನಾಂಕಃ 30-11-2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.)

**<u>ಪಾಟೀ ಸವಾಲುಃ ಶ್ರೀ ಎಮ ಎಸ ಎಸ ಎದುರುದಾರ ಪರ ವಕೀಲರಿಂದಃ</u>**

1. ನನ್ನ ವಿದ್ಯಾಭ್ಯಾಸ 9 ನೇ ತರಗತಿಯವರೆಗೆ ಆಗಿದೆ. ನಾನು ಡಿಗ್ರಿ ಪದವಿಧರ ಇರುತ್ತೇನೆ ಎಂದರೆ ಸರಿಯಲ್ಲ. ನಾವು 5 ಜನ ಅಣ್ಣ-ತಮ್ಮಂದಿರು ಇರುತ್ತೇವೆ. ನನ್ನ ಸ್ವಂತ ಊರು ಗಣಾಪುರ ಆಗಿದ್ದು ನಮ್ಮ ತಂದೆಯ ಕಾಲದಿಂದಲು ನಾವು ಚಂದಾಪುರದಲ್ಲಿ ವಾಸವಾಗಿದ್ದೇವೆ. ನನ್ನ ಮದುವೆಯು ನನ್ನ ಸಹೋದರಿಯ ಮಗಳ ಜೊತೆ ಚಂದಾಪುರದಲ್ಲಿ ಆಗಿದೆ ಎಂದರೆ ಸರಿ. ನನ್ನ ಅಕ್ಕನ ಮನೆ ಮತ್ತು ನನ್ನ ಮನೆ ಹತ್ತಿರ ಇದೆ ಎಂದರೆ ಸರಿ.

2. ಶ್ರೀಕಾಂತರವರು ಸಲ್ಲಿಸಿದ ದಾವೆ ಚಲ್ತಿಯಲ್ಲಿರುವಾಗ ನಾನು ಮತ್ತು ನನ್ನ ಹೆಂಡತಿ ಸೇರಿ ರಾಜಿ ಮಾಡಿಕೊಳ್ಳಲು ಉಮಾ ಪಾಟೀಲ ಮತ್ತು ಜಗದೀಶ ಠಾಕೂರ ಎಂಬುವವರನ್ನು ಕಳುಹಿಸಿರುತ್ತೇನೆ ಎಂದರೆ ಸಾಕ್ಷಿ ನನಗೆ ದಾವೆಯ ಬಗ್ಗೆ ಮಾಹಿತಿ ಇಲ್ಲ ಯಾರು ಕಳುಹಿಸಿದ್ದರು ಎಂದು ನನಗೆ ಗೊತ್ತಿಲ್ಲ. ಚಿಂಚೋಳಿಯಲ್ಲಿರುವ ಶಾಂತವೀರ ಸುಂಕದ ನನ್ನ ಚಿಕ್ಕಪ್ಪ. ಶಾಂತವೀರ ಸುಂಕದ ಮತ್ತು ನಾನು ಸೇರಿ ದಾವೆ ರಾಜಿ ಮಾಡಿಕೊಳ್ಳಲು ನ್ಯಾಯಾಲಯಕ್ಕೆ ಬಂದಿದ್ದೇವು ಎಂದರೆ ಸಾಕ್ಷಿ ನನಗೆ ದಾವೆಯ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ನಾನು ಮತ್ತು ಶಾಂತವೀರ ಸುಂಕದ ಪರಸ್ಪರ ಮಾತನಾಡುತ್ತೇವೆ. ನಾನು , ಉಮಾ ಪಾಟೀಲ , ಜಗದೀಶ ಠಾಕೂರ ಮತ್ತು ಶಾಂತವೀರ ಸುಂಕದ ಶ್ರೀಕಾಂತರವರು ಸಲ್ಲಿಸಿದ ದಾವೆ ಚಲ್ತಿಯಲ್ಲಿರುವಾಗ ರಾಜಿ ಮಾಡಿಕೊಳ್ಳಲು ಬಂದಿದ್ದೇವು ಎಂದರೆ ಸಾಕ್ಷಿ ನನಗೆ ದಾವೆಯ ಬಗ್ಗೆ ಮಾಹಿತಿ ಇಲ್ಲ ಎಂದು ಹೇಳುತ್ತಾರೆ. ಮೂಲ ದಾವೆ 7/2019 ರ ಬಗ್ಗೆ ನಾನು ಯಾರಿಂದ ತಿಳಿದುಕೊಂಡೆ ಎಂದರೆ ಸಾಕ್ಷಿ ಬಸಪ್ಪ ಸ್ವಾಮಿರವರಿಂದ ತಿಳಿದುಕೊಂಡೆ ಎಂದು ಹೇಳುತ್ತಾರೆ. ಸಾಕ್ಷಿ ಮುಂದುವರೆದು

ಮಳೆಯಿಂದ ಮನೆಯ ಗೊಡೆ ಬಿದ್ದಿತ್ತು ನಮ್ಮ ಪಕ್ಕದ ಮನೆಯವರು ನನಗೆ ಫೋನ ಮಾಡಿ ತಿಳಿಸಿದ್ದರು ಆಗ ನಾನು ಮುನಿಸಿಪಲ್ಟಿಗೆ ಹೋಗಿ ವಿಚಾರಿಸಿದಾಗ ಅಲ್ಲಿದ್ದ ಅಧಿಕಾರಿಗಳು ಮೂಲ ದಾವೆ 7/2019 ರ ಬಗ್ಗೆ ನನಗೆ ಹೇಳಿದರು ಎಂದು ಹೇಳುತ್ತಾರೆ. ಒಂದುವರೆ ವರ್ಷದ ಹಿಂದೆ ಮಳೆಯಿಂದ ಮನೆಯ ಗೊಡೆ ಬಿದ್ದಿತ್ತು. ಮಳೆಯಿಂದ ಮನೆಯ ಗೊಡೆ ಬಿದ್ದಿತ್ತು ನಮ್ಮ ಪಕ್ಕದ ಮನೆಯವರು ನನಗೆ ಫೋನ ಮಾಡಿ ತಿಳಿಸಿದ್ದರು ಆಗ ನಾನು ನಗರಸಭೆಗೆ ಹೋಗಿ ವಿಚಾರಿಸಿದಾಗ ಅಲ್ಲಿದ್ದ ಅಧಿಕಾರಿಗಳು ಮೂಲ ದಾವೆ 7/2019 ರ ಬಗ್ಗೆ ನನಗೆ ಹೇಳಿದರು ಎಂದು ನನ್ನ ಅರ್ಜಿಯಲ್ಲಿ ಬರೆಸಿರುತ್ತೇನೆ. ನಗರಸಭೆಗೆಯಲ್ಲಿದ್ದ ಯಾವ ಅಧಿಕಾರಿ ನನಗೆ ತಿಳಿಸಿದರು ಎಂದರೆ ಸಾಕ್ಷಿ ನನಗೆ ಅವರ ಹೆಸರು ಗೊತ್ತಿಲ್ಲ ಅವರು ಎಸ ಡಿ ಸಿ ಆಗಿದ್ದರು ಎಂದು ಹೇಳುತ್ತಾರೆ. ನಗರಸಭೆಗೆಯಲ್ಲಿದ್ದ ಅಧಿಕಾರಿಯು ಕೇಸ ನಡೆದಿರುವ ಬಗ್ಗೆ ಹೇಳಿದರು ಆಗ ನನಗೆ ಕೇಸಿನ ಬಗ್ಗೆ ಗೊತ್ತಾಯಿತು. ನಗರಸಭೆಗೆಯಲ್ಲಿದ್ದ ಅಧಿಕಾರಿಯು ಕೇಸ ನಡೆದಿರುವ ಬಗ್ಗೆ ಹೇಳಿದರು ಎಂದು ನನ್ನ ಅರ್ಜಿಯಲ್ಲಿ ಬರೆಸಿರುತ್ತೇನೆ.

3. ದಾವಾ ಮನೆಯಲ್ಲಿ ಕಳೆದ 2019 ರಿಂದ ಯಾರು ವಾಸವಾಗಿದ್ದಾರೆ ಎಂದರೆ ಸಾಕ್ಷಿ ಮಹೇಶರೆಡ್ಡಿ ಎಂಬುವವರು ಇದ್ದಾರೆ ಎಂದು ಹೇಳುತ್ತಾರೆ. ನನ್ನ ಹಾಗೂ ಮಹೇಶರೆಡ್ಡಿಯ ನಡುವೆ ಮಾತು ಕತೆ ಇದೆಯಾ ಎಂದರೆ ಸಾಕ್ಷಿ ನಾವು ಮಾತನಾಡುತ್ತೇವೆ ಎಂದು ಹೇಳುತ್ತಾರೆ. ಶ್ರೀಕಾಂತರವರು ಸಲ್ಲಿಸಿದ ದಾವೆ 7/2019 ಹಾಕಿದ ನಂತರ ಶ್ರೀಕಾಂತ ಹಾಗೂ ಮಹೇಶರೆಡ್ಡಿಯವರ ನಡುವೆ ಆದ ಜಗಳದ ಬಗ್ಗೆ ನನಗೆ ಗೊತ್ತಿಲ್ಲ. ಮನೆಯ ಆಸ್ತಿಗೆ ಸಂಬಂಧ ಪಟ್ಟಂತೆ ನಾನು ಯಾವ ವರ್ಷದಲ್ಲಿ ಶ್ರೀಕಾಂತರವರಿಗೆ ದಾಖಲೆಯನ್ನು ಬರೆದುಕೊಟ್ಟಿದ್ದೆ ಎಂದರೆ ಸಾಕ್ಷಿ ನಾನು ದಾಖಲೆ ಬರೆದುಕೊಟ್ಟಿರುವುದಿಲ್ಲ ನನಗೆ ನೆನಪಿಲ್ಲ ಎಂದು ಹೇಳುತ್ತಾರೆ. ಜಗದೇವಿ ನನ್ನ ಹೆಂಡತಿ. ನಾನು ಮತ್ತು ನನ್ನ ಹೆಂಡತಿ ಮನೆಯ ಆಸ್ತಿಗೆ ಸಂಬಂಧ ಪಟ್ಟಂತೆ ಶ್ರೀಕಾಂತರವರಿಗೆ

ದಾಖಲೆಯನ್ನು ದಿಃ 05-06-2017 ರಂದು ಬರೆದುಕೊಟ್ಟಿದ್ದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ದಾಖಲೆಗೆ ಸಂಜೀವ ಪಾಟೀಲ ತಂದೆ ಗಂಗಾಧರ ಮತ್ತು ಶಾಮರಾವ ತಂದೆ ತಿಪ್ಪಣ್ಣರವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನಾನು ಆ ದಾಖಲೆಯಲ್ಲಿ ಬರೆದ ವಿಷಯಗಳು ತಿಳಿದುಕೊಂಡು ಸಹಿ ಮಾಡಿರುತ್ತೇನೆ ಎಂದರೆ ಸಾಕ್ಷಿ ನನಗೆ ಇಂಗ್ಲಿಷ ಗೊತ್ತಾಗುವುದಿಲ್ಲ ಎಂದು ಹೇಳುತ್ತಾರೆ.

4. ನನಗೆ ದಾವೆಯ ಬಗ್ಗೆ ಯಾವಾಗ ಮಾಹಿತಿ ಬಂತು ಎಂದರೆ ಸಾಕ್ಷಿ ನನಗೆ ದಿನಾಂಕ ನೆನಪಿಲ್ಲ. ನಾನು ನಗರ ಸಭೆಗೆ ಹೋದಾಗ ಗೊತ್ತಾಯಿತು ಎಂದು ಹೇಳುತ್ತಾರೆ. ನಾನು ಬೆಂಗಳೂರಿನಲ್ಲಿ ಹೋಟೆಲ್ಲಿನಲ್ಲಿ ಕೆಲಸ ಮಾಡುತ್ತೇನೆ. ಸಾಕ್ಷಿ ಮುಂದುವರೆದು 2020 ರಲ್ಲಿ ಸರ್ವೊದಯ ಸೆಕ್ಯುರಿಟಿಯಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ಹೇಳುತ್ತಾರೆ. ನಾನು 2020 ರಿಂದ ಇಲ್ಲಿಯವರೆಗೂ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ. ನಾನು 2020 ರಿಂದ ಇಲ್ಲಿಯವರೆಗೂ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದೇನೆ ಎಂದು ತೋರಿಸಲು ನನ್ನ ಉದ್ಯೋಗ ಪ್ರಮಾಣ ಪತ್ರ ಸಲ್ಲಿಸಿರುತ್ತೇನಾ ಎಂದರೆ ಸಾಕ್ಷಿ ಸಲ್ಲಿಸಿಲ್ಲ ಮುಂದೆ ತಂದು ಕೊಡುತ್ತೇನೆ ಎಂದು ಹೇಳುತ್ತಾರೆ. ನನ್ನ ಮತ್ತು ನನ್ನ ಹೆಂಡತಿಯ ಚುನಾವಣೆ ಗುರುತಿನ ಚೀಟಿ, ಆಧಾರ ಕಾರ್ಡ ಮತ್ತು ಪಡಿತರ ಚೀಟಿ ಚಂದಾಪುರದಲ್ಲಿರುವ ದಾವಾ ಆಸ್ತಿಯ ವಿಳಾಸ ಇರುತ್ತದೆ ಎಂದರೆ ಸರಿ. ನನ್ನ ಮತ್ತು ನನ್ನ ಹೆಂಡತಿಯ ಚುನಾವಣೆ ಗುರುತಿನ ಚೀಟಿ, ಆಧಾರ ಕಾರ್ಡ ಮತ್ತು ಪಡಿತರ ಚೀಟಿ ಚಂದಾಪುರದಲ್ಲಿರುವ ದಾವಾ ಆಸ್ತಿಯ ವಿಳಾಸ ತೋರಿಸುತ್ತದೆ ಆದ್ದರಿಂದ ನನ್ನ ಖಾಯಂ ವಾಸ ಸ್ಥಳ ಚಂದಾಪುರ ಎಂದು ತೋರಿಸುತ್ತದೆ ಎಂದರೆ ಸರಿ. ಸಾಕ್ಷಿ ಮುಂದುವರೆದು ರೇಷನ ನಾನು ಇಲ್ಲಿ ತೆಗೆದುಕೊಳ್ಳುತ್ತಿಲ್ಲ ಬೆಂಗಳೂರಿನಲ್ಲಿ ತೆಗೆದುಕೊಳ್ಳುತ್ತಿದ್ದೇನೆ ಎಂದು ಹೇಳುತ್ತಾರೆ. ನಾನು ಸಲ್ಲಿಸಿರುವ ನನ್ನ ಗುರುತಿನ ಚೀಟಿಯಲ್ಲಿ ಸಹಿ ಮತ್ತು ಸೀಲ್ ಇಲ್ಲ ಎಂದರೆ ಸರಿಯಲ್ಲ. ನನ್ನ

ಹೆಂಡತಿ ಪುನಿತ ಗಾರಮೆಂಟ್ಸ ಬೆಂಗಳೂರಿನಲ್ಲಿ ಮತ್ತು ಮಗಳು ಮರಸನ ಇಂಡಿಯಾ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದಳು. ನನ್ನ ಹೆಂಡತಿ ಮತ್ತು ಮಗಳ ಗುರುತಿನ ಚೀಟಿಯಲ್ಲಿ ಸಹಿ ಮತ್ತು ಸೀಲ್ ಇಲ್ಲ ಎಂದರೆ ಸರಿಯಲ್ಲ. ನಾನು ಸಲ್ಲಿಸಿರುವ ವಿದ್ಯುತ್ ಬಿಲ್ ಚಂದಾಪುರ ಪಟ್ಟಣದ ದಾವೆ ಮನೆಗೆ ಸಂಬಂಧ ಪಟ್ಟದ್ದು ಇರುತ್ತದೆ ಎಂದರೆ ಸಾಕ್ಷಿ ಅದು ಬೆಂಗಳೂರಿನ ಚಂದಾಪುರಕ್ಕೆ ಸಂಬಂಧ ಪಟ್ಟಂತೆ ಇರುತ್ತದೆ ಎಂದು ಹೇಳುತ್ತಾರೆ. ಬೆಂಗಳೂರಿನ ಚಂದಾಪುರದಲ್ಲಿ ಬಿಲ್ಲುಗಳು ಇರುತ್ತವೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗನಿಗೆ 2017 ರಿಂದ 2021 ರವರೆಗೆ ಆರಾಮ ಇರಲಿಲ್ಲ ನನ್ನ ಮಗ ದಿಃ10-12-2021 ರಂದು ತೀರಿಕೊಂಡರು ಎಂದು ಹೇಳುತ್ತಾರೆ. ನನ್ನ ಮಗನ ಅಂತ್ಯ ಕ್ರಿಯೆ 2021 ರಲ್ಲಿ ಚಂದಾಪುರದಲ್ಲಿ ಮಾಡಿರುತ್ತೇನೆ. ನನ್ನ ಮಗನ ಅಂತ್ಯ ಕ್ರಿಯೆಗೆ ನಾವು ಚಂದಾಪುರಗೆ ಬಂದಾಗ ನನ್ನ ಅಣ್ಣನ ಮನೆಯಲ್ಲಿ ಉಳಿದುಕೊಂಡೆವು, ನನ್ನ ಅಣ್ಣನ ಮನೆ ಚಂದಾಪುರ ಚಿಂಚೋಳಿ ತಾಲೂಕಿನಲ್ಲಿ ಇರುತ್ತದೆ. ನಾನು 2021 ರಲ್ಲಿ ದಾವಾ ಮನೆಯಲ್ಲಿ ಇರುವ ಬಾಡಿಗೆದಾರರ ಜೊತೆ ಮಾತನಾಡಿರುತ್ತೇನೆ. ಅಸಲು ದಾವೆ ಸಂಖ್ಯೆ 7/2019 ಸಲ್ಲಿಸುವ ಮೊದಲು ಶ್ರೀಕಾಂತರವರು ವಕೀಲರ ಮುಖಾಂತ ನನಗೆ ಲೀಗಲ್ ನೋಟಿಸ್ಸು ಕಳುಹಿಸಿದ್ದರು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಆ ನೋಟಿಸ್ಸನ್ನು ನಿರಾಕರಿಸಿರುತ್ತೇನೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು ಚಂದಾಪುರ ಪಟ್ಟಣದ ಖಾಯಂ ನಿವಾಸಿಗ ಇದ್ದೇನೆ ಎಂದರೆ ಸರಿ. ಸಾಕ್ಷಿ ಮುಂದುವರದೆ ನನ್ನ ಮಗನ ಅನಾರೋಗ್ಯ ಇದ್ದುದ್ದರಿಂದ ನಾನು ಬೆಂಗಳೂರಿಗೆ ಹೋಗಿದ್ದೆ ಎಂದು ಹೇಳುತ್ತಾರೆ. ಅಸಲು ದಾವೆ ಸಂಖ್ಯೆ 7/2019 ಸಲ್ಲಿಸುವ ಮೊದಲು ಶ್ರೀಕಾಂತರವರು ವಕೀಲರ ಮುಖಾಂತ ನನಗೆ ಲೀಗಲ್ ನೋಟಿಸ್ಸು ಕಳುಹಿಸಿರುವ ಬಗ್ಗೆ ಮತ್ತು ದಾವೆಯ ಬಗ್ಗೆ ನನಗೆ ಮಾಹಿತಿ ಇತ್ತು ಎಂದರೆ ಸರಿಯಲ್ಲ. ಅಸಲು ದಾವೆ ಸಂಖ್ಯೆ 7/2019 ರ ದಾವೆಯ ಬಗ್ಗೆ ಮತ್ತು

ಅದರಲ್ಲಿ ತೀರ್ಪು ಆಗುವವರೆಗೆ ನನಗೆ ಎಲ್ಲಾ ಗೊತ್ತಿತ್ತು ಎಂದರೆ ಸರಿಯಲ್ಲ. ನನಗೆ ಎಲ್ಲಾ ಮಾಹಿತಿ ಇದ್ದರು ಸಹ ನಾನು ಶ್ರೀಕಾಂತರವರಿಗೆ ಸತಾಯಿಸುವ ಉದ್ದೇಶದಿಂದ ಈ ಸುಳ್ಳು ಅರ್ಜಿ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.

5. ಈ ದಾವೆಯಲ್ಲಿ ನ್ಯಾಯಾಲಯದ ಡಿಕ್ರಿಯ ಪ್ರಕಾರ ಶ್ರೀಕಾಂತರವರ ಹೆಸರಿಗೆ ಖರೀದಿ ಪತ್ರ ಆಗಿದೆ ಎಂದರೆ ನನಗೆ ಗೊತ್ತಿಲ್ಲ. ಡಿಕ್ರಿ ಆದಾಗಿನಿಂದ ಖರೀದಿ ಪತ್ರ ಆಗುವವರೆಗೆ ನಾನು ಉದ್ದೇಶ ಪೂರ್ವಕವಾಗಿ ತಡ ಮಾಡಿರುತ್ತೇನೆ ಎಂದರೆ ಸಾಕ್ಷಿ ನನಗೆ ಹಣದ ಅಡಚಣೆ ಇತ್ತು ನ್ಯಾಯಾಲಯಕ್ಕೆ ಬರಲು ಆಗಿರುವುದಿಲ್ಲ ಎಂದು ಹೇಳುತ್ತಾರೆ. ದಾವೆಯ ಬಗ್ಗೆ ನನಗೆ ಗೊತ್ತಾಗಿ ನನಗೆ ಹಣದ ಅಡಚಣೆ ಇತ್ತು ನ್ಯಾಯಾಲಯಕ್ಕೆ ಬರಲು ಆಗಿರುವುದಿಲ್ಲ ಎಂದು ಎಷ್ಟು ವರ್ಷಗಳ ಹಿಂದೆ ಗೊತ್ತಾಯಿತು ಎಂದರೆ ಸಾಕ್ಷಿ ನನಗೆ ಮಾಹಿತಿ ಗೊತ್ತಾಗಿ ಈಗ 5-6 ತಿಂಗಳು ಆಯಿತು ಅದರ ನಂತರ ನ್ಯಾಯಾಲಯಕ್ಕೆ ಬಂದಿರುತ್ತೇನೆ ಎಂದು ಹೇಳುತ್ತಾರೆ. ದಾವೆಯ ಬಗ್ಗೆ ನನಗೆ ಯಾವಾಗ ಗೊತ್ತಾಯಿತು ಎಂದರೆ ಸಾಕ್ಷಿ ನಗರ ಸಭೆಗೆ ಹೋದಾಗ ಗೊತ್ತಾಯಿತು ಎಂದು ಹೇಳುತ್ತಾರೆ. ದಾವೆ ನಡೆದಿರುವ ಬಗ್ಗೆ ನನಗೆ ಗೊತ್ತಿದ್ದು ಮೇಲೆ ಹೇಳಿದವರ ಜೊತೆ ರಾಜಿ ಮಾಡಿಕೊಳ್ಳಲು ನಾನು ಬಂದಿದ್ದರು ಸಹ ದಾವೆಯ ಬಗ್ಗೆ ನನಗೆ ಗೊತ್ತಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಇಷ್ಟೆಲ್ಲಾ ನನಗೆ ಗೊತ್ತಿದ್ದರು ಸಹ ನನ್ನ ಅರ್ಜಿಯಲ್ಲಿ ಹಾಗೂ ಪ್ರಮಾಣ ಪತ್ರದಲ್ಲಿ ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಅರ್ಜಿಯನ್ನು ಸಲ್ಲಿಸಲು ಯಾಕೆ ತಡವಾಯಿತು ಎಂದು ಕಾರಣ ಹೇಳಿಲ್ಲ ಎಂದರೆ ಸಾಕ್ಷಿ ಹಣದ ಅಡಚಣೆ ಇತ್ತು ಗೊತ್ತಾಗಿಲ್ಲ ಎಂದು ಹೇಳುತ್ತಾರೆ. ಈಗಾಗಲೆ ಶ್ರೀಕಾಂತರವರ ಹೆಸರಿಗೆ ಖರೀದಿ ಪತ್ರ ಆಗಿದ್ದರಿಂದ ಎಕ ತರ್ಫಿ ತೀರ್ಪನ್ನು ತಳ್ಳಿಹಾಕಿದ್ದು ಶ್ರೀಕಾಂತರವರಿಗೆ ತುಂಬಲಾರದ ನಷ್ಟ ಆಗುತ್ತದೆ ಎಂದರೆ ಸಾಕ್ಷಿ ನಾನು ದಾಖಲೆ ಬರೆದುಕೊಟ್ಟಿಲ್ಲ ಎಂದು ಹೇಳುತ್ತಾರೆ. ನಾನು ಉಳಿದ ಹಣವನ್ನು ತೆಗೆದುಕೊಂಡರೆ ನನಗೆ

ಯಾವುದೇ ನಷ್ಟ ಆಗುವುದಿಲ್ಲ ಎಂದರೆ ಸಾಕ್ಷಿ ನಾನು ದಾವಾ ಆಸ್ತಿಯನ್ನು ಅಡ ಇಟ್ಟಿದ್ದೆ ಮಾರಾಟ ಮಾಡಿಲ್ಲ ಎಂದು ಹೇಳುತ್ತಾರೆ. ನನ್ನ ಅರ್ಜಿಯಲ್ಲಿ ಕೇಳಿದ್ದನ್ನು ಪುರಸ್ಕರಿಸಲು ಬರುವುದಿಲ್ಲ ಎಂದರೆ ಸರಿಯಲ್ಲ. ನಾನು ದಾಖಲೆಗಳನ್ನು ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ.ನಾನು ಸುಳ್ಳು ಪ್ರಮಾಣ ಪತ್ರ ಸಲ್ಲಿಸಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇರುವುದಿಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)**

ಓ.ಹೇ.ಕೇ. ಸರಿ ಇದೆ.

ಹಿರಿಯ ಸಿವಿಲ್ ನ್ಯಾಯಾಧೀಶರು,
ಮತ್ತು ಜೆ.ಎಮ್. ಎಫ್. ಸಿ, ಚಿಂಚೋಳಿ.